

# ಕಡೆಯ ಭೇಟಿ

**ತಂದೆ ಮಕ್ಕಳ ನಡುವಿನ ಭಾವುಕ ಸಂಬಂಧ ಎಂದೂ ಹಳೆತಾಗದು. ಆದರೆ ಈ ಭಾವುಕತೆಯನ್ನೇ ನೆಚ್ಚಿಕೊಂಡು ಕಥನವನ್ನು ನಿರ್ಲಕ್ಷಿಸುವ ಈ ಕಿರುಚಿತ್ರದಲ್ಲಿ, ಕೆಲವು ಮನಸ್ಸು ಮುಟ್ಟುದ ದೃಶ್ಯಗಳಿವೆ.**

■ ಗೌರಿ

ಅಂದು ಆ ಪುಟಾಣಿಯೊಬ್ಬಳೇ ಮನೆಯೊಳಗಿದ್ದಾಳೆ. ಅಪ್ಪ ಅಮ್ಮ ಹೊರಗಡೆ ಹೋಗಿದ್ದಾರೆ. ಆಗ ಅಜ್ಜನೊಬ್ಬ ಅವಳ ಅಪ್ಪನನ್ನು ಕೇಳಿಕೊಂಡು ಮನೆಗೆ ಬರುತ್ತಾಳೆ. ಆ ಪುಟಾಣಿ ಹುಡುಗಿಯ ಬಳಿ ಒಂದು ಗ್ಲಾಸ್ ನೀರು ಕೇಳುತ್ತಾನೆ. ಹುಡುಗಿ ಅಜ್ಜನನ್ನು ಒಳಗೆ ಕರೆದು ಕೂಡಿಸಿ ನೀರು ಕೊಡುತ್ತಾಳೆ. ಅಜ್ಜ ಅವಳ ಜೊತೆಗೆ ಅಕ್ಕರೆಯಿಂದ ಮಾತಾಡುತ್ತಾರೆ. ಅವಳ ತಂದೆ ತಾಯಿಯರ ಬಗ್ಗೆಯೂ ವಿಚಾರಿಸುತ್ತಾನೆ. ಅವಳೂ ಅವನ ಬಗ್ಗೆ ಕೇಳಿದಾಗ ತುಸು ಒಗಟೆನಿಸುವ ಹಾಗೆ ಉತ್ತರಿಸುತ್ತಾನೆ. ಹೊರಡುವಾಗ ಒಂದು ಪತ್ರವನ್ನು ಆ ಮಗುವಿನ ಕೈಲಿಟ್ಟು ಹೊರಡುತ್ತಾರೆ. ಇನ್ನೇನು ಅವರು ಹೊರಡಬೇಕು, ಅಷ್ಟರಲ್ಲಿ ಹೊರಗೆ ಹೋಗಿದ್ದ ಅಪ್ಪ ಅಮ್ಮ ಬರುತ್ತಾರೆ. ಆ ಅಜ್ಜನನ್ನು ನೋಡಿದ ಅಪ್ಪನ ಕೈ ನಡುಗುತ್ತದೆ. ಕೈಯಲ್ಲಿದ್ದ ಪತ್ರ ಕೆಳಗೆ ಜಾರುತ್ತದೆ.

ತಂದೆ – ಮಗನ ನಡುವಿನ ಸಂಬಂಧದಲ್ಲಿನ ಸಂಘರ್ಷದ ಎಳೆಯನ್ನಿಟ್ಟುಕೊಂಡು ರೂಪುಗೊಂಡ ಈ ಕಿರುಚಿತ್ರ, ತಾಂತ್ರಿಕವಾಗಿ ಗಟ್ಟಿಯಾಗಿಯೇನೂ ಇಲ್ಲ. ಆದರೆ ಮನಸ್ಸನ್ನು ಮುಟ್ಟುವ ಸನ್ನಿವೇಶದ ಕಾರಣಕ್ಕೆ ಗಮನಸೆಳೆಯುತ್ತದೆ.

ತಂದೆ–ಮಕ್ಕಳ ನಡುವಿನ ಸಂಬಂಧದ ಕುರಿತು ಚಿತ್ರಗಳು ಸಾಕಷ್ಟು ಬಂದಿವೆ. ಆದರೆ ಅದೇ ಎಳೆಯನ್ನು ಇಟ್ಟುಕೊಂಡೂ ಆದಷ್ಟೂ ಬೇರೆ ರೀತಿಯಲ್ಲಿ ಕಟ್ಟಿಕೊಡಲು ನಿರ್ದೇಶಕರು ಪ್ರಯತ್ನಿಸಿದ್ದಾರೆ. ಮತ್ತೆ ಇಂಥ ಸಿನಿಮಾಗಳನ್ನು ನೋಡುವಾಗ ಪ್ರೇಕ್ಷಕನಲ್ಲಿ ಉಂಟಾಗುವ ಭಾವುಕತೆಯನ್ನು ಬಂಡವಾಳವಾಗಿಸಿಕೊಂಡು ಚಿತ್ರದ ಕೊರತೆಯನ್ನೂ ಮುಚ್ಚಿಡಲು ಯತ್ನಿಸುತ್ತಿರುವುದು ಗೊತ್ತಾಗುತ್ತದೆ.

ಇಲ್ಲಿ ತಂದೆ–ಮಗ ಯಾಕೆ ಬೇರೆಯಾಗಿದ್ದಾರೆ ಎಂಬುದರ ಉಲ್ಲೇಖ ಇಲ್ಲ. ಅದು ಯಾವುದೇ ಕಾರಣ ಹೇಳಹೊರಟರೂ ಕ್ಲೀಷೆಯಾಗಿಬಿಡಬಹುದಾಗಿದ್ದರಿಂದ ಖಾಲಿಯೇ ಬಿಟ್ಟಿರಲಿಕ್ಕೂ ಸಾಕು. ಆದರೆ ಹಾಗೆ ಬೇರೆಯಾದವರು ಹದಿನೈದು ವರ್ಷಗಳ ನಂತರ ಮಗನ ಮನೆಗೆ ಬಂದು, ಮಗನೇ ಎದುರಿಗೆ ಸಿಕ್ಕರೂ ಪತ್ರವೊಂದನ್ನು ಕೊಟ್ಟು ಹೊರನಡೆಯುವುದು, ಅವರನ್ನು ಮಗನೂ ತಡೆಯದಿರುವುದು ಅಷ್ಟೊಂದು ಕನ್ವಿನ್ಸಿಂಗ್ ಆಗಿ ಕಾಣುವುದಿಲ್ಲ. ಅಲ್ಲದೆ ಮಾರಣಾಂತಿಕ ಕಾಯಿಲೆಯಿಂದ ಮರಣಕ್ಕೆ ಹತ್ತಿರವಾಗುತ್ತಿರುವ ತಂದೆಯ ನಿವೇದಯನೆಯ ಪತ್ರವನ್ನು ಓದಿಯೂ ಮಗ ಏನು ಮಾಡಬಹುದು ಎಂಬುದು ನಿರ್ದೇಶಕರಿಗೆ ಮುಖ್ಯ ಅನಿಸದಿರುವುದು ಅಚ್ಚರಿ.

‘ಸಂಬಂಧಗಳಲ್ಲಿ ತಪ್ಪುಗಳಿಗೆ ಕ್ಷಮೆ ಇದೆ; ತಪ್ಪು ತಿಳಿವಳಿಕೆಗಳಿಗೆ ಕ್ಷಮೆ ಇರುವುದಿಲ್ಲ’ ಎಂಬ ಮಾತಿದೆ. ಆದರೆ ಆಗಿದ್ದು ತಪ್ಪು ತಿಳಿವಳಿಕೆ ಎಂದು ಗೊತ್ತಾದಮೇಲೂ ಅದನ್ನು ಸರಿಪಡಿಸಿಕೊಳ್ಳಲಾಗದಿದ್ದರೆ ಅದರಿಂದ ಏನು ಪ್ರಯೋಜನ? ಅದು ಯಾವ ಮೌಲ್ಯವನ್ನು ಹೇಳುತ್ತದೆ ಎಂಬುದರ ಬಗ್ಗೆ ಕಿರುಚಿತ್ರ ಮಾತಾಡುವುದಿಲ್ಲ. ತಾಂತ್ರಿಕವಾಗಿಯೂ ಈ ಕಿರುಚಿತ್ರದ ಶಿಲ್ಪ ಸಡಿಲವಾಗಿಯೇ ಇದೆ.

ಹೆಸರು: ಜಸ್ಟ್ ಅ ಸ್ಯಾಡ್ ರ್‍ಯಾಪ್ (ಹಿಂದಿ)
ನಿರ್ದೇಶನ: ಉತ್ಕರ್ಷ್ ಕೆ. ನೇಮಾಡೆ
ನಿರ್ಮಾಣ: ರಾಜೇಶ್ ಶರ್ಮ
ಛಾಯಾಗ್ರಹಣ, ಸಂಕಲನ: ಕುನಾಲ್ ಮಹಾಜನ್
ಸಂಗೀತ: ವಿಶ್ವೇಶ ವೈದ್ಯ
ತಾರಾಗಣ: ರಮೇಶ್ ಬೋಲೆ, ಸಂಜನಾ ಪಾಟೀಲ್, ಸಂದೀಪ್ ಪಾಟೀಲ್, ನಿಶಾ ಪವಾರ್

ಕಿರುಚಿತ್ರ ವೀಕ್ಷಣೆಗೆ https://bit.ly/3MRgPJo ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.